# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 76/2020

ಸಾಕ್ಷಿಗೆ ದಿನಾಂಕ 28-03-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 2

| | | |
|---|---|---|
| ಹೆಸರು | ಃ | ಚಂದ್ರನಾಯ್ಕ |
| ತಂದೆಯ ಹೆಸರು | ಃ | ಕೀರ್ಯಾನಾಯ್ಕ |
| ವಯಸ್ಸು | ಃ | ೬೦ ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಗೋವಿಂದಾಪುರ ತಾಂಡ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-1 ನನ್ನ ಮಗಳು, ಚಾಸಾ-5 ನನ್ನ ಹೆಂಡತಿ, ಚಾಸಾ-6 ನನ್ನ ಚಿಕ್ಕಪ್ಪ, ಚಾಸಾ-7 ನನ್ನ ಅಣ್ಣ, ಚಾಸಾ-8 1ನೇ ಆರೋಪಿತನ ಮಾವ, ಚಾಸಾ-9 ಆರೋಪಿತನ ಅಜ್ಜನಾಗಬೇಕು.

ನನ್ನ ಮಗಳಾದ ಚಾಸಾ-1 ರವರು 1ನೇ ಆರೋಪಿತನ ಜೊತೆ 2015 ರಲ್ಲಿ ಮದುವೆಯಾಗಿರುತ್ತದೆ. ಸದರಿ ಮದುವೆಯು ನಮ್ಮ ಗ್ರಾಮದಲ್ಲಿ ಮನೆಯ ಮುಂದೆ ಆಗಿರುತ್ತದೆ. ಸದರಿ ಮದುವೆ ಸಮಯಕ್ಕೆ ವರನಿಗೆ 5 ತೊಲೆ ಬಂಗಾರ, 2 ಲಕ್ಷ ನಗದು ಮತ್ತು 5-6 ಲಕ್ಷ ಹಣ ಖರ್ಚು ಮಾಡಿ ಮದುವೆ ಮಾಡಿಕೊಟ್ಟಿದ್ದೇನೆ. 1ನೇ ಆರೋಪಿತನ ಜೊತೆ ನನ್ನ ಮಗಳು ಬಾಳುವೆ ಮಾಡಲು ಹೋಗಿರುತ್ತಾಳೆ. 1ನೇ ಆರೋಪಿತನ ಮನೆಯಲ್ಲಿ 2, 3ನೇ ಆರೋಪಿತರು, ಬಸ್ಯಾ ಮತ್ತು 1ನೇ ಆರೋಪಿಯ ಚಿಕ್ಕಪ್ಪ ಚಂದ್ರಾನಾಯ್ಕ, 4ನೇ ಆರೋಪಿತ ವಾಸವಾಗಿರುತ್ತಾರೆ. 1ನೇ ಆರೋಪಿ ಮತ್ತು ನನ್ನ ಮಗಳು 2 ತಿಂಗಳು ಮಾತ್ರ ಸುಲಲಿತವಾಗಿ ಬಾಳುವೆ ಮಾಡಿರುತ್ತಾಳೆ. ಮದುವೆಗಿಂತ ಪೂರ್ವದಲ್ಲಿಯೇ 1ನೇ ಆರೋಪಿತನ ತಂದೆಯಾದ 2ನೇ ಆರೋಪಿತನು 1ನೇ ಆರೋಪಿತನ ಹೆಸರಿನಲ್ಲಿ ಜಮೀನನ್ನು ನೊಂದಣಿ ಮಾಡಿಸಿಕೊಡು ಅಂತಾ ಕೇಳುತ್ತಾ ಇದ್ದನು. ಮದುವೆಯಾದ ನಂತರ 1ನೇ ಆರೋಪಿತನು ನನ್ನ ಮಗಳಿಗೆ ಹಣ ಮತ್ತು ಬಂಗಾರ

ತೆಗೆದುಕೊಂಡು ಬಾ ಅಂತಾ ಪೀಡಿಸುತ್ತಿದ್ದ. ನನ್ನ ಮಗಳನ್ನು 1ನೇ ಆರೋಪಿತನು ನೀನು ಕಪ್ಪಾಗಿದ್ದೀಯಾ ನಾನು ಅಪ್ಪಟ ಚಿನ್ನದಂತಹ ಇನ್ನೊಂದು ಹೆಣ್ಣನ್ನು ಮದುವೆ ಮಾಡಿಕೊಂಡು ಬರುತ್ತೇನಂತಾ ಹೇಚಿ ನನ್ನ ಮಗಳಿಗೆ ಹೊಡೆಯುವುದು ಬಡಿಯುವುದು ಮಾಡುತ್ತಾ ಹಿಂಸೆ ನೀಡುತ್ತಾ ಬಂದಿದ್ದ. ಸದರಿ ಗಲಾಟೆ ಸಂಬಂಧ 3 ಸಾಗಿ ಪೋಲೀಸ್ ಠಾಣೆಗೆ ಹೋಗಿ ಪಂಚಾಯ್ತಿ ಸಹಾ ಮಾಡಿರುತ್ತೇವೆ. ಪಂಚಾಯ್ತಿಯಲ್ಲಿ 1ನೇ ಆರೋಪಿತನು ನಾನು ಮುಂದೆ ಆ ರೀತಿ ಮಾಡುವುದಿಲ್ಲಾಂತಾ ಹೇಳಿ ನನ್ನ ಮಗಳನ್ನು ಮನೆಗೆ ಕರೆದುಕೊಂಡು ಹೋಗುತ್ತಿದ್ದ ಮತ್ತು ಅದೇ ರೀತಿ ಪುನಃ ಪೀಡಿಸುತ್ತಾ ಬಂದಿರುತ್ತಾನೆ. ಮನೆಯಲ್ಲಿ ನಿನಗೆ ಅಡುಗೆ ಮಾಡಲು ಬರುವುದಿಲ್ಲ, ಕೆಲಸ ಮಾಡಲು ಬರುವುದಿಲ್ಲ ಅಂತಾ ಹಿಂಸೆ ನೀಡುತ್ತಿದ್ದ. ಈ ಬಗ್ಗೆ ನಾನೂ ಸಹಾ 1ನೇ ಆರೋಪಿತನಿಗೆ ಬುದ್ಧಿವಾದ ಹೇಳಿರುತ್ತೇನೆ. ಮದುವೆಯಾದ 2 ವರ್ಷದ ನಂತರ ಚಾಸಾ-7, 8 ರವರೊಂದಿಗೆ ನಾನು ಹೋಗಿ ಪಂಚಾಯ್ತಿಯನ್ನು ಮಾಡಿರುತ್ತೇವೆ. ಆಗ 2ನೇ ಆರೋಪಿತನು ನಿನ್ನ ಮಗಳಿಗೆ ಏನೂ ಕೆಲಸ ಮಾಡಲು ಬರುವುದಿಲ್ಲ ನೀನು ಕರೆದುಕೊಂಡು ಹೋಗು ಅಂತಾ ನನಗೆ ತಿಳಿಸಿರುತ್ತಾರೆ ಆಗ ನಾನು ಅವಳನ್ನು ಕರೆದುಕೊಂಡು ಹೋಗಲು ಬಂದಿಲ್ಲ, ಅವರ ಜೀವನ ಚೆನ್ನಾಗಿ ಆಗಲೀ ಅಂತಾ ಹೇಳಿರುತ್ತೇನೆ. ಮದುವೆಯಾದ 2 ವರ್ಷಕ್ಕೆ ಈ ಪ್ರಕರಣವಾಗಿದೆ.

(ಈ ಹಂತದಲ್ಲಿ ಮಾನ್ಯ ಸ ಸ ಅ ರವರು ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದರು ನೀಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ